
ಇತ್ತಿಂದತ್ತ ತೂಗಾಡಿಸುತ್ತಿದ್ದರು. "ಎಂತಹ ದುರಂತಕ್ಕೆ ನಾನು ಈಡಾದೆ" ಎಂದು ಕ್ರೊಯಿಸಸ್ಸನು ಅಪಮಾನದಿಂದಲೂ ದುಃಖಾತಿರೇಕದಿಂದಲೂ ಕುಗ್ಗಿಹೋದನು. ಆ ಕ್ಷಣಕ್ಕೆ ಸರಿಯಾಗಿ ಅದೆಷ್ಟೋ ವರ್ಷಗಳ ಹಿಂದೆ ಸೋಲಾನ್ ಜ್ಞಾನಿಯು ಹೇಳಿದ್ದ "ಆತುರ ಬೀಳಬೇಡ ದೊರೆಯೆ, ಸ್ವಲ್ಪ ತಾಳಿಕೊ, ನಿನ್ನ ಜೀವನಯಾತ್ರೆ ಇಂದಿಗೇ ಮುಗಿದುಹೋಯಿತೇನು? ಚಕ್ರದ ಅರೆಕಾಲುಗಳಂತೆ ಸುಖದುಃಖಗಳು ಒಂದರ ಹಿಂದೊಂದು ಉರುಳುತ್ತಿರುವುದನ್ನು ನೀನು ನೋಡುತ್ತಿಲ್ಲವೇ" ಎಂಬ ಉಪದೇಶವಾಣಿ ಕ್ರೊಯಿಸಸ್ಸನ ಹೃದಯದಲ್ಲಿ ಘಂಟಾನಾದದಂತೆ ಅನುರಣಿಸತೊಡಗಿತು.

ಕ್ರೊಯಿಸಸ್ಸನಿಗೆ ತಡೆದುಕೊಳ್ಳಲಾಗಲಿಲ್ಲ. "ನಾನೆಂತಹ ಅವಿವೇಕಿಯಾದೆ" ಎಂದು ಪಶ್ಚಾತ್ತಾಪಕ್ಕೆ ತುತ್ತಾಗಿ, "ಸೋಲಾನ್ ಸೋಲಾನ್, ನನ್ನನ್ನು ಕ್ಷಮಿಸು, ನನ್ನನ್ನು ಕ್ಷಮಿಸು" ಎಂದು ದುಃಖಾತಿರೇಕದಿಂದ ಭೂಮ್ಯಾಕಾಶಗಳು ನಡುಗುವಂತೆ ಕಿರುಚಿಕೊಂಡನು. ಅದನ್ನು ಕೇಳಿಸಿಕೊಂಡ ಪರ್ಷಿಯಾ ದೊರೆಗೆ ವಿಸ್ಮಯವಾಯಿತು, ಗಾಬರಿಯೂ ಆಯಿತು. "ಸ್ವಲ್ಪ ನಿಲ್ಲಿ" ಎಂದು ಸೇವಕರಿಗೆ ಆಜ್ಞೆಮಾಡಿದನು, ತಾನೇ ಪೀಠದಿಂದ ಇಳಿದುಬಂದು 'ಅದಾರು ಸೋಲಾನ್, ಅವನು ನಿನಗೇನಾಗಬೇಕು? ಅವನನ್ನೇಕೆ ಕೂಗುತ್ತಿದ್ದೀಯೆ, ಸರಿಯಾಗಿ ಹೇಳು" ಎಂದು ಕ್ರೊಯಿಸಸ್ಸನನ್ನು ಕೇಳಿದನು. ಆಗ ಕ್ರೊಯಿಸಸ್ಸನು "ದೊರೆಯೆ, ನಾನು ಜೀವಂತವಾಗಿ ಭಸ್ಮವಾಗುತ್ತಿದ್ದೇನೆಂಬ ಅಂಜಿಕೆಯಾಗಲಿ, ದುಃಖವಾಗಲಿ ನನಗಿಲ್ಲ. ಸೋಲಾನ್‌ನಂತಹ ಜ್ಞಾನಿಯ ವಚನವನ್ನು ಲೆಕ್ಕಿಸದೆ ಅವನನ್ನು ಅವಿವೇಕಿ ಎಂದು ಜರಿದುದಕ್ಕೆ ಪಶ್ಚಾತ್ತಾಪ ಪಡುತ್ತಿದ್ದೇನೆ. ಈಗ ನನ್ನ ಕಣ್ಣುಗಳು ತೆರೆದವು. ಸೋಲಾನ್‌ನಲ್ಲಿ ಕ್ಷಮೆಯಾಚಿಸುತ್ತಿದ್ದೇನೆ. ಅವನು ಎಲ್ಲಿದ್ದರೂ ನನ್ನನ್ನು ಕ್ಷಮಿಸಲಿ" ಎಂದು ಪೂರ್ವಕಥೆಯನ್ನೆಲ್ಲ ಮರ್ಮಸ್ಪರ್ಶಿಯಾಗಿ ಹೇಳಿದನು. ಅದನ್ನು ಕೇಳಿ ಪರ್ಷಿಯಾದೊರೆಯ ಹೃದಯವೂ ಕರಗಿಹೋಯಿತು. ಕ್ರೊಯಿಸಸ್ಸನ ಪ್ರಾಣವನ್ನು ಉಳಿಸಿಕೊಟ್ಟನು. "ನಿನ್ನ ಜೀವನಯಾತ್ರೆ ಇಂದಿಗೇ ಮುಗಿದುಹೋಯಿತೇನು?" ಎಂಬ ಸೋಲಾನ್‌ಜ್ಞಾನಿಯ ಮಾತಿಗೆ ಮರುಜೀವ ಬಂದಿತು. ಕ್ರೊಯಿಸಸ್ಸನ ಜೀವನಯಾತ್ರೆ ಮತ್ತೆ ಮುಂದುವರಿಯಿತು.

"ಇದೇ ನಮ್ಮೆಲ್ಲರ ಜೀವನ ಕಥೆ. ಪ್ರಕೃತಿಗೆ ನಮ್ಮ ಮೇಲಿರುವ ಅದ್ಭುತಶಕ್ತಿಯೇ ಇದು. ಪ್ರಕೃತಿಯು ಮರಮರಳಿ ನಮ್ಮನ್ನು ಒದೆಯುತ್ತದೆ. ಆದರೂ ಅತಿ ಅವಾಂತರದಿಂದ ಅದನ್ನು ನಾವು ಹಿಂಬಾಲಿಸುತ್ತೇವೆ. ನಾವು ಯಾವಾಗಲೂ ನಿರಾಸೆಯಲ್ಲಿಯೇ ಆಸೆಯನ್ನು ಚಪ್ಪರಿಸುತ್ತಿದ್ದೇವೆ. ಈ ನಿರೀಕ್ಷೆಯೇ ನಮ್ಮನ್ನು ಭ್ರಾಂತರನ್ನಾಗಿ ಮಾಡಿದೆ. ನಾವೆಲ್ಲ ಸುಖದ ಭರವಸೆಯಲ್ಲಿ ಬದುಕುತ್ತಿದ್ದೇವೆ' ಎಂಬ ವಿವೇಕಾನಂದ ಸ್ವಾಮಿಗಳ ಮುಕ್ತಾಯದ ಮಾತುಗಳು ಕೂಡ ಮನೋಜ್ಞವಾಗಿವೆ.

## 'ಸತ್ಯಮೇವ ಜಯತೇ' – ಮುಖಪುಟದ ವಿವರಣೆ

'ಸತ್ಯಮೇವ ಜಯತೇ' ಎಂಬುದು ಅತ್ಯಂತ ಪ್ರಸಿದ್ಧವಾದ, ಜನಜನಿತವಾದ ಉಪನಿಷದ್ವಾಣಿ. ಭಾರತದ ರಾಷ್ಟ್ರೀಯ ಲಾಂಛನದ ಅಡಿಯಲ್ಲಿ ಬಳಸಲಾಗಿರುವ ಈ ವಾಕ್ಯವನ್ನು ಭಾರತೀಯ ನಾಣ್ಯ ಮತ್ತು ನೋಟುಗಳಲ್ಲಿ ಮುದ್ರಿಸಲಾಗಿದೆ. ಸತ್ಯವೆನ್ನುವ ಮೌಲ್ಯ ಮಹಾತ್ಮಾ ಗಾಂಧೀಜಿಯವರ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿರುವುದು ಸರ್ವವಿದಿತ. ಪಂಡಿತ ಮದನ ಮೋಹನ ಮಾಲವೀಯರು ಈ ಉಪನಿಷತ್ತಿನ ಮಂತ್ರವನ್ನು ಜನಪ್ರಿಯಗೊಳಿಸಿದರು.



सत्यमेव जयते


ಮುಂಡಕೋಪನಿಷತ್ತಿನಲ್ಲಿ ಬರುವ ಈ ಮಂತ್ರದ ಪೂರ್ಣಪಾಠ ಹೀಗಿದೆ: **ಸತ್ಯಮೇವ ಜಯತೇ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ । ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ ಸತ್ಯಸ್ಯ ಪರಮಂ ನಿಧಾನಮ್** ॥ 'ಸತ್ಯವೇ ಜಯಿಸುತ್ತದೆ, ಅನೃತವಲ್ಲ. ಸತ್ಯದ ಆ ಪರಮ ನಿಧಾನವು ಇರುವಲ್ಲಿಗೆ ಆಪ್ತಕಾಮರಾದ, (ಅಂದರೆ ಬಯಕೆಗಳನ್ನು ಪೂರೈಸಿಕೊಂಡು ಆಸೆಗಳಿಂದ ಮುಕ್ತರಾಗಿರುವ) ಋಷಿಗಳು ಯಾವ ಪಥದಿಂದ ಹೋಗುತ್ತಾರೋ ಅಂತಹ ದೇವಯಾನವೆಂಬ ಪಥವು ಸತ್ಯದಿಂದ ಹರಡಿರುತ್ತದೆ.' *(ಮುಂಡಕೋಪನಿಷತ್, ೩.೧.೬)*

ನಮ್ಮ ಪರಂಪರೆಯ ಉದ್ದಕ್ಕೂ ಕಂಡುಬರುವ ನೈತಿಕ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಮೌಲ್ಯಗಳಿಗೆ ಆಧಾರವೇ ಸತ್ಯ. ಇದಕ್ಕನುಗುಣವಾಗಿ ನಮ್ಮ ಲೌಕಿಕ, ಆರ್ಥಿಕ, ಧಾರ್ಮಿಕ, ಆಧ್ಯಾತ್ಮಿಕ ಜೀವನ ರೂಪುಗೊಳ್ಳುತ್ತವೆ. ಈ ಎಲ್ಲವಕ್ಕೂ ತಾತ್ತ್ವಿಕ ಅಡಿಪಾಯವನ್ನು ಒದಗಿಸುವಂತೆ ಉಪನಿಷತ್ತುಗಳ ದಿವ್ಯದರ್ಶನ **'ಸತ್ಯಮೇವ ಜಯತೇ'** ಎಂಬ ಈ ಅದ್ಭುತ ವಾಣಿಯನ್ನು ಜಗತ್ತಿಗೆ ನೀಡಿದೆ.

ಶ್ರೀರಾಮಕೃಷ್ಣರ ಅವತರಣದಿಂದ ಸತ್ಯಯುಗ ಆರಂಭವಾಯಿತು ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಶ್ರೀರಾಮಕೃಷ್ಣರು ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದ, ತಮ್ಮ ಶಿಷ್ಯಂದಿರಿಗೂ ಇತರ ಸಾಧಕರಿಗೂ ಉಪದೇಶಿಸಿದ ಮಹೋನ್ನತ ತತ್ತ್ವವೇ ಸತ್ಯ. 'ಭಗವತಿಯ ಪಾದಗಳಲ್ಲಿ ಎಲ್ಲವನ್ನೂ ಅರ್ಪಿಸಿಬಿಟ್ಟೆ. ಆದರೆ ಸತ್ಯವೊಂದನ್ನು ಮಾತ್ರ ಅರ್ಪಿಸಲಾಗಲಿಲ್ಲ' ಎಂದಿದ್ದಾರೆ ಶ್ರೀರಾಮಕೃಷ್ಣರು. ಸತ್ಯವನ್ನೇ ತೊರೆದುಬಿಟ್ಟರೆ ಉಳಿದವಕ್ಕೆ ನೆಲೆಯೆಲ್ಲಿ? ಎಂದು ಅವರು ಪ್ರಶ್ನಿಸುತ್ತಾರೆ. ಸತ್ಯದಲ್ಲಿ ಸಂಪೂರ್ಣ ಒಂದಾಗಿದ್ದ ಅವರು ಆಡಿದ ಪ್ರತಿಯೊಂದು ನುಡಿಯೂ ಸತ್ಯವೇ ಆಗಿತ್ತು, ಅವರು ಆಡಿದ್ದೆಲ್ಲ ಸತ್ಯವಾಗುತ್ತಿತ್ತು. ಸತ್ಯವನ್ನು ಸಂಪೂರ್ಣವಾಗಿ ಜೀವನದಲ್ಲಿ ಅಳವಡಿಸಿಕೊಂಡ ಅವರ ಆದರ್ಶ ನಮ್ಮ ದೈನಂದಿನ ಜೀವನದಲ್ಲಿ ಹರಿಯತೊಡಗಿದಾಗಲೇ ನಿಜವಾಗಿ ಸತ್ಯಯುಗ ಆರಂಭವಾಗುವುದು.

# ಸರಹದ್ದುಗಳಿಲ್ಲದ ಸಂತರ ನೆನಪಿನ ಚಿತ್ರಗಳು

**ಸರಹದ್ದುಗಳಿಲ್ಲದ ಸಂತ** *(ಸ್ವಾಮಿ ರಂಗನಾಥಾನಂದರನ್ನು ಕುರಿತ ನೆನಪುಗಳು)* (ಗಟ್ಟಿಕವಚ), ಪ್ರಧಾನ ಸಂಪಾದಕ– ಡಾ॥ ಪ್ರಧಾನ್ ಗುರುದತ್ತ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಜ್ಞಾನಭಾರತಿ, ಬೆಂಗಳೂರು–೫೬೦೦೫೬. ಪ್ರಥಮ ಮುದ್ರಣ–೨೦೧೩, ಪುಟಗಳು–xxi+೬೧೨, ಬೆಲೆ– ರೂ. ೨೫೦.




ಸ್ವಾಮಿ ರಂಗನಾಥಾನಂದಜಿಯವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಆ ಅಸಾಧಾರಣ ವ್ಯಕ್ತಿತ್ವಕ್ಕೆ ಶ್ರದ್ಧೆ ಸಲ್ಲಿಸುವ ಸಲುವಾಗಿ ಅವರನ್ನು ಕುರಿತಾದ ೧೩೫ ವಿವಿಧ ಸ್ಮೃತಿ ಲೇಖನಗಳನ್ನು ಕೊಲ್ಕತ್ತದ ಅದ್ವೈತ ಆಶ್ರಮವು ಪ್ರಕಟಿಸಿತ್ತು. ಅದರ ಕನ್ನಡ ಆವೃತ್ತಿಯನ್ನು ಇದೀಗ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದವರು ಹೊರತಂದಿದ್ದಾರೆ. ಸ್ವಾಮಿಗಳ ನೇರ ಸಂಪರ್ಕಕ್ಕೆ ಬಂದಿದ್ದ ಸಮಾಜದ ವಿವಿಧ ಸ್ತರಗಳಲ್ಲಿರುವ ವ್ಯಕ್ತಿಗಳು ಅನೇಕ ಘಟನೆಗಳ ಮೂಲಕ ಅವರ ಘನವ್ಯಕ್ತಿತ್ವದ ಗಾಂಭೀರ್ಯ, ಮಾರ್ದವ ಹಾಗೂ ಸೌಷ್ಠವಗಳನ್ನು ಅಳೆಯುವ ಪ್ರಯತ್ನ ಮಾಡಿದ್ದಾರೆ. ಆ ಮೂಲಕ ಯಾರು ಸ್ವಾಮೀಜಿಯವರನ್ನು ನೋಡಿಲ್ಲವೋ ಅವರಿಗೂ ಸ್ವಾಮಿಗಳ ಪರಿಚಯವನ್ನು ಚೆನ್ನಾಗಿ ಮಾಡಿಸಿದ್ದಾರೆ. ಇಲ್ಲಿರುವ ಅನೇಕ ಘಟನೆಗಳಲ್ಲಿ ನಮ್ಮ ಜೀವನಕ್ಕೆ ಬೇಕಾದ ಸೂಕ್ಷ್ಮ ಮೌಲ್ಯಗಳ ಗಣಿ ಅಡಗಿದೆ.

"ಮೈಸೂರು ಆಶ್ರಮದ ಅಡುಗೆಯವನೀಗ ಅಧ್ಯಕ್ಷನಾಗಿ ನೇಮಕಗೊಂಡಿದ್ದಾನೆ", (ಪು.೧೬) ಎಂದು ಮಹಾರಾಜ್ ತಮಾಷೆಯ ಮೂಲಕವಾಗಿಯೇ ತಮ್ಮ ನಮ್ರತೆ ಹಾಗೂ ಮಾನವನ ಅನಂತ ಶಕ್ತಿ–ಸಾಧ್ಯತೆಗಳನ್ನು ಒಟ್ಟಿಗೆ ಹೇಳಿರುವ ಪರಿ ಅದ್ಭುತವಾಗಿದೆ! ತಮ್ಮೆಲ್ಲ ಉಪನ್ಯಾಸಗಳಲ್ಲಿ ಈ ಎರಡನೆಯ ಅಂಶವನ್ನು ಅವರು ಒತ್ತಿ ಹೇಳುತ್ತಿದ್ದುದು ನಮ್ಮ ಗಮನಕ್ಕೆ ಬರುತ್ತದೆ. ಹೆಚ್ಚಿನ ವಿದ್ಯಾಭ್ಯಾಸ ಮಾಡದಿದ್ದರೂ ಆಶ್ರಮ ಸೇರಿದ ಮೇಲೂ ನಿರಂತರ ಉತ್ಸಾಹ ಹಾಗೂ ಶ್ರಮದಿಂದ ಅನೇಕ ಗ್ರಂಥಗಳನ್ನು ಓದಿ ತಮ್ಮ ಜ್ಞಾನಸಂಪತ್ತನ್ನು ಬೆಳೆಸಿಕೊಂಡು ಜೀವಂತ ವಿಶ್ವಕೋಶವೇ ಆಗಿದ್ದರು ಸ್ವಾಮಿಗಳು. ಸ್ವಾಮಿಗಳ ಮೂಲಮಂತ್ರ, "simple living high thinking" (ಉದಾತ್ತ ಆಲೋಚನೆಯಿಂದ ಕೂಡಿದ ಸರಳ ಜೀವನ) ಎಂದಾಗಿತ್ತು. ಒಮ್ಮೆ ಯೂರೋಪಿನ ಒಂದು ದೇಶದ ರಾಯಭಾರಿಯೊಬ್ಬರು, ರಂಗನಾಥಾನಂದರನ್ನು ಚೆನ್ನಾಗಿ ಬಲ್ಲವರು, ತಾವು ಏರ್ಪಡಿಸಿದ್ದ ಸಭೆಗೆ ಅವರನ್ನು ಆಹ್ವಾನಿಸಿದರು. ಸ್ವಾಮೀಜಿ ತಯಾರಾಗಿ ಹೊರಟರು. ಅವರೊಂದಿಗೆ ಹೋಗಲು ಮತ್ತೊಬ್ಬರು ಸ್ವಾಮಿಗಳು ಅಣಿಯಾಗಿ ಹೊರಟುನಿಂತರು. ಅವರಿಬ್ಬರ ದಿರಿಸುಗಳಲ್ಲಿ ಅಜಗಜಾಂತರ! ಅವರಿಬ್ಬರು ಹೊರಡುತ್ತಿದ್ದಂತೆ, ಸ್ವಾಮೀಜಿಯ ಧೋತಿಯ ಹಿಂಭಾಗದಲ್ಲಿ ಕಲೆಯಿದ್ದುದು ಕಂಡುಬಂತು. ಅದನ್ನು ಅವರ ಗಮನಕ್ಕೆ ತರಲಾಯಿತು. ಜೊತೆಗೆ ಅಂಚಿನ ಒಂದು ಭಾಗ ಜೂಲುಜೂಲಾಗಿತ್ತು. ಸ್ವಾಮಿಗಳು ನಗುತ್ತ, ನಡೆಯುತ್ತಾ ನುಡಿದರು, "ನಾನು ಏನು ಮಾತನಾಡುತ್ತೇನೆಂದು ಜನರು ಗಮನಿಸುತ್ತಾರೆಯೇ ಹೊರತು ನನ್ನ ಬಟ್ಟೆಯ ಬಗ್ಗೆ ಅವರು ಯೋಚಿಸುವುದಿಲ್ಲ" (ಪು.೬೧).

೧೯೯೦ರಲ್ಲಿ ಆಂಧ್ರಪ್ರದೇಶದಲ್ಲಿ ಚಂಡಮಾರುತವಾದಾಗ ದೊಡ್ಡ ಪ್ರವಾಹ ಬಂದು ಪ್ರಾಂತ್ಯದ ಅಣೆಕಟ್ಟು ಒಡೆಯಿತು. ಹೊಸದಾಗಿ ಕಟ್ಟಿದ ನಗರದೊಳಗೆ ಪ್ರವಾಹದ ನೀರು ಸತ್ತ ಪ್ರಾಣಿಗಳೊಂದಿಗೆ ಒಳನುಗ್ಗಿತು. ರಂಗನಾಥಾನಂದಜಿ ತಾವಲ್ಲಿಗೆ ಹೋಗುವುದಾಗಿ ಹೇಳಿದರು. ಸಹಾಯಕ ಸ್ವಾಮಿಗಳು ಬೇಡವೆಂದರೂ ಕಿವಿಗೊಡಲಿಲ್ಲ. ಅವರನ್ನು ಹಿಂಬಾಲಿಸಿ ನಾಲ್ಕು ಐ.ಎ.ಎಸ್ ಅಧಿಕಾರಿಗಳೂ ಕೊಚ್ಚೆಯಿಂದ ಜಾರುತ್ತಿರುವ ನೀರಿನಲ್ಲಿಳಿದು ಬಂದರು. ಸುತ್ತಲೂ ಕೆಸರು ಮಣ್ಣಿತ್ತು ಮತ್ತು ಸರಿಯಾದ ಸ್ನಾನದ ಮನೆ ಅಲ್ಲೆಲ್ಲೂ ಇರಲಿಲ್ಲ. ಅವರ ಸಹಾಯಕ ಸ್ವಾಮಿಗಳು, "ಮಹಾರಾಜ್, ನಾನು ನಿಮಗೆ ಸ್ನಾನದ ಕೋಣೆಯ ವ್ಯವಸ್ಥೆಯನ್ನು ನಗರದಲ್ಲಿ ಮಾಡಿದ್ದೇನೆ" ಎಂದಾಗ, "ಬೇಡ, ನಾನು ಇಲ್ಲಿಯೇ ಇರುವೆ. ನಿನ್ನ ಹಾಸಿಗೆಯನ್ನು ಕೊಡು" ಎಂದು ಸುತ್ತಲೂ ಯಾವ ಗೋಡೆಗಳಿರದ ಕೊಟ್ಟಿಗೆಯಲ್ಲಿಯೇ ಮಲಗಿದರು! ಮಧ್ಯಾಹ್ನ ಹಳ್ಳಿಗರನ್ನುದ್ದೇಶಿಸಿ ಮಾತನಾಡಿದರು. ಒಂದು ಮುರಿದ ಮೇಜಿನ ಮೇಲೆ ಕುಳಿತು ಮಾತನಾಡಲು ಆರಂಭಿಸಿದರು. ಆ ನಾಲ್ವರು ಐ.ಎ.ಎಸ್ ಅಧಿಕಾರಿಗಳೂ ಜತೆಸೇರಿದರು. ಅವರಲ್ಲೊಬ್ಬರು ಭಾಷಣವನ್ನು ಅನುವಾದಿಸಲು ಆರಂಭಿಸಿದರು. ಬಡಜನರು, ವಿಧವೆಯರು, ವಸತಿಹೀನರು, ಬಟ್ಟೆಯಿಲ್ಲದ ಮೀನುಗಾರರು ಹೀಗೆ ಎಲ್ಲ ಹಳ್ಳಿಗರು ಬಂದರು. ಅವರ ಹೆಸರೇ ಮೋಡಿ ಮಾಡಿತು. ಐದಾರು ಹಳ್ಳಿಗಳ ಜನರು ಬಂದರು. ಆ ಹಳ್ಳಿಯಲ್ಲಿ ಅಷ್ಟೊಂದು ಜನರು ಹಿಂದೆಂದೂ ಸೇರಿರಲಿಲ್ಲ. ಅವರ ಪ್ರತಿಯೊಂದು ವಾಕ್ಯವನ್ನೂ ಅನುವಾದಿಸಲಾಯಿತು. ಅವರ ಭಾಷಣ ಮುಗಿದ ಮೇಲೆ ಮುದುಕಿಯರು, ಸ್ಥೈರ್ಯ ಕಳೆದುಕೊಂಡವರು ಅವರ ಬಳಿ ಬಂದು, ಪಾದಸ್ಪರ್ಶ ಮಾಡಿ ಧನ್ಯತಾಭಾವವನ್ನು ಹೊಂದಿದರು! (ಪು.೩೬–೩೭)

ಅವರ ಸಕಾರಾತ್ಮಕವಾದ ಮನೋಭಾವ ಅದ್ವಿತೀಯ! ಅಂದಿನ ದಿನಗಳಲ್ಲಿ ಕೊಲ್ಕತ್ತದಲ್ಲಿ ನಕ್ಸಲರ ಹಾವಳಿ